ಸವದತ್ತಿಯಲ್ಲಿರುವ ಕೋಟೆಯನ್ನು ಸಂರಕ್ಷಿಸುವುದು.

೭೭೧ (೪೭೭) ಶ್ರೀ ಚಂದ್ರಶೇಖರ್ ಮಾಮನಿ (ಸವದತ್ತಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸವದತ್ತಿ ಊರಿನ ಪಶ್ಚಿಮದ ಎತ್ತರವಾದ ಚಿಕ್ಕದಿನ್ನಿಯ ಮೇಲೆ ಸುಮಾರು ಕ್ರಿ.ಶ. ೧೭೫೧ರಲ್ಲಿ ಬಿಳಿಕಲ್ಲಿನಲ್ಲಿ ಅತ್ಯಂತ ಸುಂದರವಾಗಿ ನಿರ್ಮಿಸಿದ ಕೋಟೆ ಇದ್ದು ಈ ಕೋಟೆಯು ಮೈಂಟೆನೆನ್ಸ್ ಹಾಗೂ ಪ್ರೊಟಕ್ಷನ್ ಇಲ್ಲದೆ ಹಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಕೋಟೆಯ ಸಂರಕ್ಷಣೆ ಮತ್ತು ಮೈಂಟೆನೆನ್ಸ್ ಸಲುವಾಗಿ ಸರ್ಕಾರದವರು ೨ ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿರುವುದಾಗಿ ಹೇಳಿಕೆ ನೀಡಿದ್ದು. ಆದರೆ, ಈ ಅನುದಾನವನ್ನು ಒಂದು ವರ್ಷ ಕಳೆದರೂ ಕೂಡಾ ಇದುವರೆಗೂ ಕೋಟೆಯ ಸಂರಕ್ಷಣೆ ಮತ್ತು ಮೈಂಟೆನೆನ್ಸ್ ಸಲುವಾಗಿ ವಿನಿಯೋಗಿಸುವಲ್ಲಿ ವಿಳಂಬವಾಗಲಿಕ್ಕೆ ಕಾರಣವೇನು ?

ಇ) ವಂಜೂರಿ ಮಾಡಿದ ೨ ಲಕ್ಷ ರೂಪಾಯಿಗಳು ಈ ಕೋಟೆಯ ರಿಪೇರಿಗೆ ಸಾಲದಿದ್ದು, ಹೆಚ್ಚಿನ ಅನುದಾನವನ್ನು ಮಂಜೂರಿ ಮಾಡಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ ? ಹಾಗಿದ್ದಲ್ಲಿ ಈ ವರ್ಷ ಎಷ್ಟು ಅನುದಾನವನ್ನು ಮಂಜೂರಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ, (ಮುಖ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಇ) ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯ ಇಲಾಖೆಯು ಈ ಕೋಟೆಯ ಸಂರಕ್ಷಣೆ ಮತ್ತು ಮೈಂಟೆನೆನ್ಸ್ ಸಲುವಾಗಿ ರೂ. ೧,೯೦,೦೦೦.೦೦ ಅಂದಾಜು ಪಟ್ಟಿ ತಯಾರಿಸಿದೆ. ಈ ಕೆಲಸವನ್ನು ೧೯೯೯-೯೦ರ ಸಾಲಿನಲ್ಲಿ ಕೈಗೊಳ್ಳಲಾಗುವುದು.

ದಸರಾ ಉತ್ಸವದ ಕೈಗಾರಿಕಾ ಮತ್ತು ಸಾಂಸ್ಕೃತಿಕ ವಸ್ತು ಪ್ರದರ್ಶನ.

೭೮೦ (೪೭೭) ಶ್ರೀ ಪಿ. ಎಂ. ಚಿಕ್ಕಬೋರಯ್ಯ, ಎಂ.ಎಲ್.ಎ. (ಚಾಮರಾಜ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ದಸರಾ ನಾಡಹಬ್ಬದಲ್ಲಿ ಪ್ರತಿ ವರ್ಷ ಕೈಗಾರಿಕಾ ಮತ್ತು ಸಾಂಸ್ಕೃತಿಕ ವಸ್ತು ಪ್ರದರ್ಶನ ಎಂದಿನಿಂದ ಪ್ರಾರಂಭಿಸಲ್ಪಟ್ಟಿತು ?

ಆ) ಮೊದಲೇ ವಸ್ತು ಪ್ರದರ್ಶನ ಕಟ್ಟಡವನ್ನು ಖಾಲಿ ಮಾಡಿಸಿ, ದೊಡ್ಡಕೆರೆ ಮೈದಾನಕ್ಕೆ ಪರ್ಯಾಯವಾಗಿ ಸ್ಥಳಾಂತರಗೊಳಿಸಿದ್ದು ಯಾವಾಗ ಮತ್ತು ಯಾವ ಉದ್ದೇಶಕ್ಕಾಗಿ, ಆ ಉದ್ದೇಶ ಸಫಲವಾಗಿದೆಯೆ ?

ಇ) ದೊಡ್ಡಕೆರೆ ಮೈದಾನದಲ್ಲಿ ಖಾಯಂ ವಸ್ತುಪ್ರದರ್ಶನದ ಕಟ್ಟಡ ನಿರ್ಮಿಸುವುದಾಗಿ ಪ್ರತಿ ವರ್ಷದ ಉದ್ಘಾಟನೆ ಕಾಲದಲ್ಲಿ ಘೋಷಿಸಲಾಗುತ್ತಿದೆಯಾದರೂ ಏತಕ್ಕೆ ಇದುವರೆಗೆ ನಿರ್ಮಾಣ ಕಾರ್ಯ ಕೈಗೊಂಡಿಲ್ಲದಿರಲು ಕಾರಣಗಳೇನು ?

ಈ) ಈ ವರ್ಷವಾದರೂ ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲು ಎಷ್ಟು ಮೊಬಲಗು ಮಂಜೂರು ಮಾಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೯೪೪ ರಲ್ಲಿ.

ಆ) ಸ್ಥಳಾವಕಾಶ ಸಾಲದೆ ಬಂದುದರಿಂದ ಮತ್ತು ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಸ್ಥಳಾವಕಾಶ ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ೧೯೭೬ರಲ್ಲಿ ಕಟ್ಟಡವನ್ನು ಬಿಟ್ಟುಕೊಡಲಾಯಿತು.